**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2023** **ಅ.ಸಾ.11**

**ಚಾ.ಸಾ.27**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೇಖರ |
| ತಂದೆಯ ಹೆಸರು | - | ಲೇಟ್ ಪದ್ಮ ಮೇಸ್ತ್ರಿ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ನಿವೃತ್ತ ಪಿ.ಎಸ್.ಐ |
| ವಿಳಾಸ | - | ಉಡುಪಿ |

ದಿನಾಂಕಃ 11-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು 18-12-2019 ರಿಂದ 20-02-2020 ರವರೆಗೆ ಉಡುಪಿ ನಗರ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 13-02-2020 ರಂದು ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ ಪುತ್ತೂರು ಗ್ರಾಮದ ವಿಷ್ಣುಮೂರ್ತಿ ನಗರದ ನಾಲ್ಕನೇ ಅಡ್ಡ ರಸ್ತೆಯಲ್ಲಿರುವ ನವೀಕರಣಗೊಳ್ಳುತ್ತಿರುವ ಮನೆಯಲ್ಲಿ ವೃದ್ಧ ಮಹಿಳೆಯ ಕೊಲೆ ಆಗಿದೆ ಎನ್ನುವ ಮಾಹಿತಿ ಬಂದ ಮೇರೆಗೆ ತಕ್ಷಣ ನಾನು ನನ್ನ ಸಿಬ್ಬಂದಿಗಳೊಂದಿಗೆ ಸದ್ರಿ ಸ್ಥಳಕ್ಕೆ ಹೋಗಿ ನೋಡಿದಾಗ ಮೃತರ ಮಗಳು ಸ್ಥಳದಲ್ಲಿ ಬೆಳಿಗ್ಗೆ 10-00 ಗಂಟೆಗೆ ಲಿಖಿತ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿಕೊಂಡು ಬೆಳಿಗ್ಗೆ 10-30 ಕ್ಕೆ ಠಾಣೆಗೆ ಬಂದು ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ರವಾನಿಸಿರುತ್ತೇನೆ. ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಅದು ದೃಢೀಕೃತ ನಕಲು ಇದ್ದು, ಮೂಲ ದೂರನ್ನು ನಿಪಿ-1 ಎಂದು ಎಸ್.ಸಿ. ನಂ.1/2021 ರಲ್ಲಿ ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.32 ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ.28 ಇವರು ಕೈಗೊಂಡಿರುತ್ತಾರೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದಃ**

ನಗರ ಠಾಣೆಯಿಂದ ಘಟನಾ ಸ್ಥಳವು 3 ಕಿ.ಮೀ. ದೂರ ಇದೆ. ಮಾಹಿತಿ ದೊರೆತ ಅರ್ಧ ಗಂಟೆಯೊಳಗೆ ಘಟನಾ ಸ್ಥಳಕ್ಕೆ ತಲುಪಿರುತ್ತೇನೆ. ಸ್ಥಳಕ್ಕೆ ತಲುಪುವಾಗ ಬೆಳಿಗ್ಗೆ 9-30 ಗಂಟೆ ಆಗಿತ್ತು. ಘಟನಾ ಸ್ಥಳದ ಫೋಟೋವನ್ನು ನಾನು ತೆಗೆದಿರುವುದಿಲ್ಲ. ಘಟನಾ ಸ್ಥಳದಲ್ಲಿ ಸುಮಾರು 10 ಜನ ಸೇರಿದ್ದಾರೆ. ಮೃತ ದೇಹವು ಸ್ಥಳದಲ್ಲಿಯೇ ಇತ್ತು. ನಾನು ಮನೆಯಲ್ಲಿದ್ದ ಬೀರುವನ್ನು ಪರಿಶೀಲನೆ ಮಾಡಿರುವುದಿಲ್ಲ. ದೂರಿನಲ್ಲಿ ಮೃತಳ ಆಭರಣದ ಕುರಿತು ನಮೂದಿಸಿರುತ್ತಾರೆ. ಘಟನಾ ಸ್ಥಳದಲ್ಲಿದ್ದ ಮನೆಯಲ್ಲಿದ್ದ ನಗದು ಹಣದ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. ದೂರನ್ನು ಸ್ವೀಕರಿಸುವುದು ಬಿಟ್ಟರೆ ಈ ಪ್ರಕರಣದಲ್ಲಿ ನಾನು ಬೇರೆ ಏನೂ ತನಿಖೆ ನಡೆಸಿರುವುದಿಲ್ಲ. ದೂರನ್ನು ಸ್ವತಃ ದೂರುದಾರರೇ ಬರೆದು ಕೊಟ್ಟಿರುತ್ತಾರೆ. ದೂರುದಾರರು ದೂರು ನೀಡಿದ್ದು ಇಲ್ಲ, ನಾನು ಘಟನಾ ಸ್ಥಳಕ್ಕೆ ಹೋದದ್ದು ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಠಾಣೆಯಿಂದ ಘಟನಾ ಸ್ಥಳ 3 ಕಿ.ಮೀ. ದೂರ ಇದೆ. ನಾನು ಗಸ್ತು ಕರ್ತವ್ಯದಲ್ಲಿದ್ದಾಗ ಘಟನೆ ಬಗ್ಗೆ ಮಾಹಿತಿ ಬಂದಿರುತ್ತದೆ. ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸಮಯ ನೆನಪಿಲ್ಲ. ನಾನು ಸ್ಥಳಕ್ಕೆ ಹೋದಾಗ ಆನಂದ, ನಾಗರಾಜು ಪ್ರಭು ಎಂಬವರು ಸ್ಥಳದಲ್ಲಿ ಇದ್ದರು. ಅವರನ್ನು ಘಟನೆ ಬಗ್ಗೆ ಕೇಳಿಲ್ಲ. ಚಾಸಾ2, 3, 4 ಮತ್ತು 8 ರವರು ಘಟನೆ ಬಗ್ಗೆ ನನಗೆ ಮಾಹಿತಿ ನೀಡಿದ್ದಾರೆ ಮತ್ತು ನಾನು ಅದನ್ನು ಮರೆ ಮಾಚಿದ್ದೇನೆ ಎಂದರೆ ಸರಿಯಲ್ಲ. ಚಾಸಾ1 ಕಾಸರಗೋಡು ಜಿಲ್ಲೆಯವರಾಗಿದ್ದು ಘಟನೆ ವಿಷಯ ತಿಳಿದು ಬಂದಿದ್ದಾರೆ ಎಂದರೆ ಸರಿ. ನಿಪಿ-1 ರಲ್ಲಿರುವ ವಿಚಾರ ಪ್ರಥಮ ವರ್ತಮಾನ ವರದಿ ಮಾಹಿತಿ ಅಲ್ಲ ಮತ್ತು ನಾವು ಪ್ರಥಮ ವರ್ತಮಾನ ವರದಿ ಮರೆಮಾಚಿದ್ದೇವೆ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿ ದಾಖಲಿಸಿದಾಗ ಬೆಳಿಗ್ಗೆ 10-00 ಗಂಟೆಯಾಗಿತ್ತು. ನಮ್ಮ ಠಾಣೆಯಿಂದ ನ್ಯಾಯಾಲಯ ಸುಮಾರು 500 ಮೀ. ದೂರದಲ್ಲಿದೆ. ಪ್ರಥಮ ವರ್ತಮಾನ ವರದಿಯನ್ನು ಎಚ್.ಸಿ.162 ಇವರ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಹೇಳಿದ ಸಮಯದಲ್ಲಿ ಪ್ರಕರಣ ದಾಖಲಿಸಿಲ್ಲ ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.